**D**

**SL. No. : H**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]
ಸಂಕೇತ ಸಂಖ್ಯೆ : **96-K**

**CCE PR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
**Code No. : 96-K**

# ವಿಷಯ : ಅರ್ಥಶಾಸ್ತ್ರ
# Subject : ECONOMICS

**( ಕನ್ನಡ ಭಾಷಾಂತರ / Kannada Version )**

**( ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater )**

ದಿನಾಂಕ : 22. 06. 2019 ] [ Date : 22. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಹೆಚ್ಚು ತಲಾ ಆದಾಯ ಹೊಂದಿರುವ ದೇಶ

   (A) ಜಪಾನ್

   (B) ಭಾರತ

   (C) ಕೀನ್ಯಾ

   (D) ಬಾಂಗ್ಲಾದೇಶ

2. ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಭಾರತದ ರಾಜ್ಯ

   (A) ಕರ್ನಾಟಕ

   (B) ತಮಿಳುನಾಡು

   (C) ಮಧ್ಯಪ್ರದೇಶ

   (D) ಆಂಧ್ರಪ್ರದೇಶ

3. ವಿಶ್ವದಲ್ಲಿ ಕುಟುಂಬ ಯೋಜನೆಯನ್ನು ಮೊದಲ ಬಾರಿಗೆ ಜಾರಿಗೊಳಿಸಿದ ರಾಷ್ಟ್ರ

   (A) ಚೀನಾ

   (B) ಭಾರತ

   (C) ಬಾಂಗ್ಲಾದೇಶ

   (D) ಶ್ರೀಲಂಕಾ

4. ಹಸಿರು ಕ್ರಾಂತಿ ಎಂದರೆ

   (A) ಹಣ್ಣುಗಳ ಉತ್ಪಾದನೆಯಲ್ಲಿನ ಹೆಚ್ಚಳ

   (B) ಹಾಲಿನ ಉತ್ಪಾದನೆಯಲ್ಲಿನ ಹೆಚ್ಚಳ

   (C) ಮೀನಿನ ಉತ್ಪಾದನೆಯಲ್ಲಿನ ಹೆಚ್ಚಳ

   (D) ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳ

5. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು

(A) ನಬಾರ್ಡ್

(B) ಭೂ ಅಭಿವೃದ್ಧಿ ಬ್ಯಾಂಕು

(C) ಸಹಕಾರಿ ಬ್ಯಾಂಕು

(D) ಪ್ರಾದೇಶಿಕ ಗ್ರಾಮೀಣ ಬ್ಯಾಂಕು

6. ಜೀತ ಪದ್ಧತಿ ನಿರ್ಮೂಲನೆಯ ಕಾಯಿದೆಯನ್ನು ಜಾರಿಗೆ ತಂದ ವರ್ಷ

(A) 1966

(B) 1976

(C) 1986

(D) 1996

7. ಕೃಷಿ ಋತು ಆಧಾರಿತ ಕಸುಬಾಗಿರುವುದರಿಂದ

(A) ಕೃಷಿ ಕಾರ್ಮಿಕರ ಆದಾಯ ಕಡಿಮೆಯಾಗಿದೆ

(B) ರೈತರಿಗೆ ಹೆಚ್ಚಿನ ಲಾಭ ದೊರೆಯುತ್ತಿದೆ

(C) ಸರ್ಕಾರಕ್ಕೆ ಹೆಚ್ಚಿನ ಕಂದಾಯ ಬರುತ್ತಿದೆ

(D) ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗಿದೆ

8. ನಿರಂತರವಾಗಿ ಏರುತ್ತಿರುವ ಬೆಲೆಗಳ ಕಾರಣದಿಂದಾಗಿ

(A) ಬಡ ಜನರು ತಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಆಗುತ್ತಿಲ್ಲ

(B) ಶ್ರೀಮಂತರು ಹೆಚ್ಚು ವಸ್ತುಗಳನ್ನು ಖರೀದಿಸುತ್ತಿದ್ದಾರೆ

(C) ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ

(D) ಶ್ರೀಮಂತರು ಬಡತನ ರೇಖೆಯಿಂದ ಕೆಳಗಿಳಿದಿದ್ದಾರೆ

9. ಭಾರತದಲ್ಲಿ ರಸ್ತೆ ಸಾರಿಗೆಯು ಪ್ರಮುಖ ಸಾರಿಗೆಯಾಗಿದೆ. ಏಕೆಂದರೆ

(A) ಭಾರತ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ

(B) ಭಾರತವು ಹಳ್ಳಿಗಳಿಂದ ಕೂಡಿರುವ ರಾಷ್ಟ್ರವಾಗಿದೆ

(C) ಭಾರತವು ಪಟ್ಟಣಗಳಿಂದ ಕೂಡಿರುವ ರಾಷ್ಟ್ರವಾಗಿದೆ

(D) ಭಾರತ ಅನಭಿವೃದ್ಧಿಶೀಲ ರಾಷ್ಟ್ರವಾಗಿದೆ

10. ಭಾರತೀಯ ರಿಸರ್ವ್ ಬ್ಯಾಂಕ್‌ಗೆ ನೀಡಿರುವ ವಿಶೇಷ ಅಧಿಕಾರ

(A) ಹಣಕಾಸು ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವುದು

(B) ಸಹಕಾರಿ ಬ್ಯಾಂಕುಗಳನ್ನು ನಿಯಂತ್ರಿಸುವುದು

(C) ಕಾನೂನು ಮತ್ತು ಕಟ್ಟಳೆಗಳನ್ನು ರಚಿಸುವುದು

(D) ಭೂ–ಅಭಿವೃದ್ಧಿ ಬ್ಯಾಂಕುಗಳ ಮೇಲ್ವಿಚಾರಣೆ ನಡೆಸುವುದು

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| *A* ಪಟ್ಟಿ | *B* ಪಟ್ಟಿ |
|---|---|
| (A) ತಾರಾಪುರ | (i) ರಾಜಸ್ಥಾನ |
| (B) ನರೋರ | (ii) ತಮಿಳುನಾಡು |
| (C) ರಾಣಾ ಪ್ರತಾಪ ಸಾಗರ | (iii) ಮಹಾರಾಷ್ಟ್ರ |
| (D) ಕಕ್ರಾಪಾರ್ | (iv) ಕರ್ನಾಟಕ |
| (E) ಕೈಗಾ | (v) ಉತ್ತರ ಪ್ರದೇಶ |
| | (vi) ಗುಜರಾತ್ |
| | (vii) ಆಂಧ್ರ ಪ್ರದೇಶ |

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಆರ್ಥಿಕ ಅಭಿವೃದ್ಧಿ ಎಂದರೇನು ?

13. ಸಾಗುವಳಿ ಭೂಮಿಯನ್ನು ಏಕೆ ವಿಸ್ತರಿಸಲಾಗುತ್ತಿದೆ ?

14. ಗ್ರಾಮೀಣ ವಿದ್ಯುದೀಕರಣ ನಿಗಮವನ್ನು ಏಕೆ ಸ್ಥಾಪಿಸಲಾಗಿದೆ ?

15. ನೀರಾವರಿ ವ್ಯವಸ್ಥೆ ಎಂದರೇನು ?

16. ಕೃಷಿ ಹಣಕಾಸಿನ ಪ್ರಕಾರಗಳನ್ನು ಹೆಸರಿಸಿ.

17. ಭಾರತೀಯ ಇಂಪಿರೀಯಲ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು ?

18. ಬಡತನ ಎಂದರೇನು ?

19. ಬಡತನದ ಎರಡು ವಿಧಗಳನ್ನು ಹೆಸರಿಸಿ.

20. ನೆಹರೂ ರೋಜ್‌ಗಾರ್ ಯೋಜನೆಯ ಮುಖ್ಯ ಉದ್ದೇಶವೇನು ?

21. ಮೂಲಭೂತ ಸೌಕರ್ಯದ ಎರಡು ವಿಧಗಳಾವುವು ?

22. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಯಾರು ಮಾಡುತ್ತಾರೆ ?

23. ಭಾರತೀಯ ಕೇಂದ್ರ ಬ್ಯಾಂಕು ಯಾವುದು ?

24. ಭಾರತೀಯ ರಿಸರ್ವ್ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣಗೊಳಿಸಲಾಯಿತು ?

25. ಪ್ರಪಂಚದ ಮೊಟ್ಟ ಮೊದಲ ಕೇಂದ್ರ ಬ್ಯಾಂಕು ಎಲ್ಲಿ ಆರಂಭವಾಯಿತು ?

26. ವ್ಯಾಪಾರ ಎಂದರೇನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. ಸಾಮಾಜಿಕ ಲಕ್ಷಣಗಳು ಅನಭಿವೃದ್ಧಿಗೆ ಹೇಗೆ ಕಾರಣವಾಗಿವೆ ?

28. ಭಾರತದಲ್ಲಿ ಮರಣದರ ಕಡಿಮೆಯಾಗಲು ಕಾರಣಗಳೇನು ?

29. ಭಾರತದಲ್ಲಿ ಜನಸಾಂದ್ರತೆಯು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಹೆಚ್ಚಾಗಿದೆ. ಏಕೆ ?

30. ಭಾರತದಲ್ಲಿ ಭೂಸುಧಾರಣೆಗಳು ವಿಫಲವಾಗಿವೆ. ಏಕೆ ?

31. ಪ್ರಾದೇಶಿಕ ಬ್ಯಾಂಕುಗಳು ಕೃಷಿ ಹಣಕಾಸಿನಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ವಿವರಿಸಿ.

32. ತಕ್ಕಾವಿ ಸಾಲಗಳು ರೈತರಿಗೆ ಹೇಗೆ ಸಹಕಾರಿಯಾಗಿವೆ ?

33. ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗ ಸ್ಥಾಪಿತವಾಗಿರುವ ಮಂಡಳಿಗಳನ್ನು ಹೆಸರಿಸಿ.

34. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಹೇಗೆ ಕಾರ್ಯನಿರ್ವಹಿಸುತ್ತವೆ ?

35. ಕೃಷಿ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳೇನು ?

36. ಭಾರತೀಯ ರೈಲು ಮಾರ್ಗದ ಗೇಜ್‌ಗಳನ್ನು ಹೆಸರಿಸಿ.

37. ಭಾರತೀಯ ರೈಲ್ವೆಯು ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ವಿಶ್ಲೇಷಿಸಿ.

38. ಭಾರತದ ಪ್ರಮುಖ ಆಮದುಗಳನ್ನು ಹೆಸರಿಸಿ.

39. ಆಧುನಿಕ ಯುಗದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರವು ಅತ್ಯವಶ್ಯಕವಾಗಿದೆ. ಏಕೆ ?

40. ಭಾರತದ ರಫ್ತು ವ್ಯಾಪಾರದ ದಿಕ್ಕನ್ನು ವಿವರಿಸಿ.

41. ಕೃಷಿಯ ಮೇಲಿನ ಅಧಿಕ ಅವಲಂಬನೆ ರಾಷ್ಟ್ರೀಯ ಆದಾಯವನ್ನು ಹೇಗೆ ಕಡಿಮೆ ಮಾಡುತ್ತದೆ ?

42. ಮಣ್ಣನ್ನು ಹೇಗೆ ಸಂರಕ್ಷಿಸಬಹುದು ?

43. ಅರಣ್ಯಗಳಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿ.

44. ಅಲ್ಯೂಮಿನಿಯಂನಿಂದಾಗುವ ಉಪಯೋಗಗಳನ್ನು ತಿಳಿಸಿ.

45. ಜನಸಂಖ್ಯಾ ಸ್ಫೋಟದ ಪರಿಣಾಮಗಳನ್ನು ವಿವರಿಸಿ.

46. ಮಾನವ ಶಕ್ತಿಯೋಜನೆಯ ನಾಲ್ಕು ಹಂತಗಳನ್ನು ತಿಳಿಸಿ.

47. ಭಾರತದಲ್ಲಿ ನೀರಾವರಿಯು ಅತ್ಯಗತ್ಯವಾಗಿದೆ. ಏಕೆ ?

48. ಹಸಿರು ಕ್ರಾಂತಿಯಿಂದಾದ ಪ್ರಯೋಜನಗಳೇನು ?

49. ಅಲ್ಪಾವಧಿಯ ಕೃಷಿ ಸಾಲ ಮತ್ತು ದೀರ್ಘಾವಧಿಯ ಕೃಷಿ ಸಾಲಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸ ಬರೆಯಿರಿ.

50. ಸಣ್ಣ ಪ್ರಮಾಣದ ಕೈಗಾರಿಕೆಗಳ ಲಕ್ಷಣಗಳನ್ನು ತಿಳಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಐದರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

51. ಅಭಿವೃದ್ಧಿ ಹೊಂದಿದ ದೇಶಗಳ ಲಕ್ಷಣಗಳೇನು ?

52. ನಿರುದ್ಯೋಗ ಸಮಸ್ಯೆಯು ಬಡತನಕ್ಕೆ ಹೇಗೆ ಕಾರಣವಾಗಿದೆ ?

53. ಆರ್ಥಿಕಾಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರ ಮುಖ್ಯವಾಗಿದೆ. ಹೇಗೆ ?

54. ಜಮೀನ್ದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಗಳ ನಡುವಿನ ವ್ಯಾತ್ಯಾಸಗಳೇನು ?

55. ಕೃಷಿ ಕಾರ್ಮಿಕರ ಲಕ್ಷಣಗಳನ್ನು ತಿಳಿಸಿ.

56. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳಾವುವು ?

VI. **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :** $1 \times 4 = 4$

57. ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಮಹತ್ವವನ್ನು ವಿವರಿಸಿ.